**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.49/2024**

ಫಿರ್ಯಾದುದಾರರು : ಸರ್ಕಾರದ ಪರ ಬ್ಯಾಡರಹಳ್ಳಿ ಪೊಲೀಸರು

ವಿರುದ್ಧ

ಆರೋಪಿ : ಎ2. ತಬ್ರೇಜ್ ಪಾಷ,
ತಂದೆಃ ಅಕ್ಮಲ್,
ವಯಸ್ಸುಃ 26 ವರ್ಷ,
ವಾಸಃ ಪ್ರಕಾಶ್ ರವರ ಮನೆ,
6 ನೇ ತಿರುವು, ದೊಡ್ಡಣ್ಣ ಲೇಔಟ್,
ಬೆಂಗಳೂರು ನಗರ.

ದೋಷಾರೋಪಣೆ

ನಾನು ಬಿ.ಎಸ್.ರೇಖಾ, ಬಿ.ಎ.(ಲಾ), ಎಲ್ಎಲ್.ಎಮ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು, ನೀವು-ಆರೋಪಿಯಾದ ತಬ್ರೇಜ್ ಪಾಷ, ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ:

ದಿನಾಂಕ 27.05.2019 ರಂದು ಮುಂಜಾನೆ 4.30 ಗಂಟೆ ಸಮಯಲ್ಲಿ 2 ನೇ ಆರೋಪಿಯಾದ ನೀನು ಪ್ರಕರಣ ಬೇರ್ಪಟ್ಟಿರುವ ಇತರ ಆರೋಪಿತರೊಂದಿಗೆ ಹಾಗೂ ಮೃತಪಟ್ಟಿರುವ 3 ನೇ ಆರೋಪಿಯೊಂದಿಗೆ ತಿಗಳರಪಾಳ್ಯ ಮುಖ್ಯ ರಸ್ತೆ ಮಂಜುಶ್ರೀ ಗಾರ್ಮೆಂಟ್ಸ್ ಬಳಿ 2 ನೇ ಆರೋಪಿಯಾದ ನೀನು ಒಂದು ಚಾಕು ಹಿಡಿದುಕೊಂಡಿದ್ದು, ಪ್ರಕರಣ ಬೇರ್ಪಟ್ಟಿರುವ 1 ನೇ ಆರೋಪಿ ಬಳಿ ಒಂದು ಚೂರಿ, ಮೃತಪಟ್ಟಿರುವ 3 ನೇ ಆರೋಪಿಯು ಒಂದು ಕ್ರಿಕೇಟ್ ಬ್ಯಾಟ್ ಮತ್ತು ಪ್ರಕರಣ ಬೇರ್ಪಟ್ಟಿರುವ 4 ನೇ

ಆರೋಪಿ ಬಳಿ ಒಂದು ಖಾರದಪುಡಿ ಪ್ಯಾಕೇಟ್ ಹಿಡಿದು ರಸ್ತೆಯಲ್ಲಿ ಒಂಟಿಯಾಗಿ ಬರುವ ಸಾರ್ವಜನಿಕರು ಹಾಗೂ ವಾಹನ ಸವಾರರನ್ನು ತಡೆದು ಅವರಿಗೆ ಹೆದರಿಸಿ, ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಅಥವಾ ಖಾರದಪುಡಿ ಎರಚಿ ಹಣ ಹಾಗೂ ಆಭರಣಗಳನ್ನು ದೋಚಲು ಸಿದ್ಧತೆ ನಡೆಸಿದ್ದು ಮತ್ತು ಈ ಕಾರಣದಿಂದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ದಂಡ ಸಂಹಿತೆ ಕಲಂ 399 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ, 2 ನೇ ಆರೋಪಿಯಾದ ನೀನು ಪ್ರಕರಣ ಬೇರ್ಪಟ್ಟಿರುವ ಇತರ ಆರೋಪಿತರೊಂದಿಗೆ ಹಾಗೂ ಮೃತಪಟ್ಟಿರುವ 3 ನೇ ಆರೋಪಿಯೊಂದಿಗೆ ಸೇರಿಕೊಂಡು, ದರೋಡೆ ಮಾಡುವ ಉದ್ದೇಶದಿಂದ ಕೈಗಳಲ್ಲಿ ಮಾರಕಾಸ್ತ್ರಗಳಾದ ಒಂದು ಚೂರಿ, ಒಂದು ಚಾಕು, ಒಂದು ಕ್ರಿಕೇಟ್ ಬ್ಯಾಟ್ ಮತ್ತು ಖಾರದಪುಡಿ ಪ್ಯಾಕೇಟ್ ಹಿಡಿದುಕೊಂಡು ಅಕ್ರಮವಾಗಿ ಗುಂಪು ಸೇರಿಕೊಂಡಿದ್ದು ಮತ್ತು ಈ ಕಾರಣದಿಂದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವ ಭಾರತೀಯ ದಂಡ ಸಂಹಿತೆ ಕಲಂ 402 ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ.

(ಈ ದಿನ ದಿನಾಂಕ 18 ನೇ ಡಿಸೆಂಬರ್, 2025)

(ಶ್ರೀಮತಿ ಬಿ.ಎಸ್.ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು.